ಕೆಲಸದಲ್ಲೂ' ಅಂದರು.

'ಅವರಿಗೆ ಬಟ್ಟೆ ತೊಳೆಯಲು ಮಾತ್ರ ಬರೂದಿಲ್ಲ ಅಣ್ಣ, ನಾನೇ ಸಂಜೆ ಬಂದು ತೊಳೆದುಕೊಡ್ತೇನೆ' ಅನ್ನುತ್ತ ಮಾಯಿ ನಕ್ಕಳು.

ದೊಡ್ಡಪ್ಪ 'ಇಲ್ಲ ಇಲ್ಲ ಬಟ್ಟೆಯನ್ನೂ ಮಾಯಿಶೀನನೇ ತೊಳೆಯಬೇಕು, ನಾವೆಲ್ಲ ನಮ್ಮ ಮನೆಗಳಲ್ಲಿ ಹಾಗೇ, ನಮ್ಮ ನಮ್ಮ ಬಟ್ಟೆಗಳನ್ನು ನಾವೇ ತೊಳೆಯುತ್ತೇವೆ' ಅಂದರು ದೊಡ್ಡಪ್ಪ. 'ಆದರೂ ಅದು ಹೆಂಗಸರು ಮಾಡುವ ಕೆಲಸ ಅಲ್ಲವ ಅಣ್ಣ' ಅಂತ ರಾಗವೆಳೆದ ಮಾಯಿಶೀನ. ದೊಡ್ಡಪ್ಪನಿಗೆ ಕೋಪ ಬಂತು. 'ಯಾರು ಹೇಳಿದ್ದು ನಿನಗೆ, ಬಟ್ಟೆ ತೊಳೆಯೋದು ಹೆಣ್ಣುಮಕ್ಕಳು ಮಾತ್ರ ಅಂತ. ಅದನ್ನು ಮೊದಲು ಮನಸ್ಸಿನಿಂದ ಸಾಬೂನು ಉಜ್ಜಿ ತೊಳೆದುಬಿಡು. ನಾಳೆಯಿಂದ ನೀನೇ ಬಂದು ಬಟ್ಟೆ ತೊಳೆದುಕೊಡು' ಅಂದರು ದೊಡ್ಡಪ್ಪ. 'ನನಗೆ ಆ ಕೆಲಸ ಬರೋದು ಡೌಟೇ' ಅಂತ ಮಾಯಿಶೀನ ತಲೆ ಕೆರೆದುಕೊಂಡ. 'ಬರದಿದ್ದರೆ ಕಲಿತುಕೋ' ಅಂತ ದೊಡ್ಡಪ್ಪ ಮಾತು ಮುಗಿಸಿದರು.

ಅಜ್ಜಿ ಕೂತಲ್ಲೇ 'ಆಯಿತು, ಇವನು ಕಲಿತು ಉದ್ಧಾರ ಹಾಕಿದ ಹಾಗೇ' ಅಂತ ಗೊಣಗಿ ಕೊಂಡಳು. ಜಾತ್ರೆ ಮುಗಿಸಿ ದೊಡ್ಡಪ್ಪ 'ಅರ್ಜಂಟ್ ಕೆಲಸವಿದೆ' ಅಂತ ಹೊರಟರು.

ಮಾರನೆ ದಿನದಿಂದ ಮಾಯಿಶೀನಣ್ಣನ ಬಟ್ಟೆ ತೊಳೆಯುವ ಕಾರ್ಯಕ್ರಮ ಆರಂಭವಾಯಿತು. ಅಜ್ಜಿ ತನ್ನ ಸ್ನಾನ ಮುಗಿದ ನಂತರ ಧರ್ಮನಿಗೂ ಬೇಗ ಸ್ನಾನ ಮಾಡಲು ಹೇಳಿದಳು. ಒಂದು ಬಕೇಟಿನ ನೀರಿನಲ್ಲಿ ಸಾಬೂನು ಪುಡಿ ಗರಡಿದಳು. ಇಬ್ಬರ ಬಟ್ಟೆಗಳನ್ನೂ ಅದರಲ್ಲಿ ನೆನೆ ಹಾಕಿದಳು. ಮಾಯಿಶೀನನಿಗಾಗಿ ಕಾದಳು. ಸ್ವಲ್ಪ ಹೊತ್ತಿಗೆಲ್ಲ, 'ಅವನೆಲ್ಲಿ ಬರ್ತಾನೆ, ನಾನೇ ತೊಳೆದುಬಿಡ್ತೇನೆ' ಅನ್ನುತ್ತ ಬಾವಿಯ ಬಳಿ ಹೊರಟಿದ್ದಳು. ಅಷ್ಟರಲ್ಲೇ ಮಾಯಿಶೀನ ಪ್ರತ್ಯಕ್ಷನಾದ. ನೇರ ಬಂದು ಬಟ್ಟೆ ತೊಳೆಯುವ ಕಲ್ಲಿನ ಮೇಲೆ ಕೂತ. ಒಂದೊಂದೇ ಬಟ್ಟೆ ತೆಗೆದು ಟಪಟಪ ಬಡಿಯ ತೊಡಗಿದ. ಅಜ್ಜಿ ಓಡಿ ಹೋಗಿ, 'ಏನು ಮಾಡುತ್ತಿದ್ದಿ ಮಾಶೀನ. ಮೊದಲು ನೀರು ಜಗ್ಗಿ ಡ್ರಮ್ಮು ತುಂಬಿಸಿಕೊ, ಬಟ್ಟೆ ಒಗೆಯಲು ಮೊದಲು ನೀರು ಬೇಕಲ್ಲವೇ?' ಅಂತ ಗದರಿದಳು. ಶೀನಣ್ಣ ಮೇಲೇಳುತ್ತ 'ಓಹೋ ಹಾಗೋ' ಅನ್ನುತ್ತ ಬಿಂದಿಗೆ ಬಾವಿಗೆ ಬಿಟ್ಟು ಡ್ರಮ್ಮಿನಲ್ಲಿ ನೀರು ತುಂಬಿಸಿಕೊಂಡ. ಮತ್ತೆ ಕೂತು, ಮೊದಲು ಅಜ್ಜಿಯ ಸೀರೆಯನ್ನೇ ಎತ್ತೆತ್ತಿ ಬಡಿಯತೊಡಗಿದ. ಆ ದೊಡ್ಡ ಸದ್ದಿಗೆ ಅಜ್ಜಿಯ ಇಡೀ ತೋಟ ಬೆದರಿ ನಡುಗತೊಡಗಿತು.

ಅಜ್ಜಿ ಸೀರೆಯಿಂದ ಸಿಡಿದ ನೀರಿನಲ್ಲಿ ಗಿಡಮರಗಳೆಲ್ಲ ತಮ್ಮ ಮುಖ ಮೈ ತೋಯಿಸಿಕೊಂಡು ಕಂಗಾಲಾದವು. ಬಹುಕಾಲದಿಂದ ಬಾಳಿಸಿಕೊಂಡು ಬಂದ ಅಜ್ಜಿಯ ಸೀರೆ ಮಾಯಿಶೀನಣ್ಣನ ಏಳೆಂಟು ಹೊಡೆತಕ್ಕೆ ಹರಿದು ಚಿಂದಿಯಾಗಿ ಹೋಯಿತು.

'ಅಯ್ಯೋ ಅಯ್ಯೋ ನಿಲ್ಸು ಮಾಯಿಶೀನ, ಹೀಗೆ ಬಡಿದರೆ ನನ್ನ ಬಟ್ಟೆಗಳು ಮೂರು ದಿನವೂ ಬಾಳಿಕೆ ಬರುವುದಿಲ್ಲ. ನನ್ನ ಮಗ ಭೀಮಜಿ ತಂದುಕೊಟ್ಟ ಸೀರೆ ಅಂತ ಎಷ್ಟೋ ಕಾಲದಿಂದ ಕಾಪಾಡಿಕೊಂಡು ಬಂದಿದ್ದೆ, ಭತ್ತದ ತೆನೆ ಬಡಿದಂತೆ ಬಡಿದು ಒಂದೇ ನಿಮಿಷದಲ್ಲಿ ಚಿಂದಿ ಮಾಡಿಬಿಟ್ಟೆಯಲ್ಲೋ' ಅಂತ ಕೋಪದಿಂದಲೇ ಮರುಗಿದಳು.

'ಅಯ್ಯೋ ತಪ್ಪಾಗಿ ಹೋಯ್ತಮ್ಮಾ' ಅನ್ನುತ್ತ ಮಾಯಿಶೀನ ಗಡಿಬಿಡಿಗೆ ಬಿದ್ದ. ಅಜ್ಜಿ, 'ನಿನ್ನ ಸಹವಾಸವೇ ಸಾಕು, ನಮ್ಮ ಕೆಲಸ ನಾವೇ ಮಾಡಿ ಕೊಳ್ಳುವುದು ಉತ್ತಮ, ಅನ್ನುತ್ತ ಮುನಿಸಿಕೊಂಡು ಮನೆಗೆ ಹೋಗಿ ಹೊರ ಕಟ್ಟೆಯಲ್ಲಿ ಕೂತಳು.

ಆಗ ಅಲ್ಲೇ ಆಡಿಕೊಳ್ಳುತ್ತಿದ್ದ ನಮ್ಮ ಧರ್ಮ, ನಿಧಾನವಾಗಿ ಬಟ್ಟೆ ತೊಳೆಯುವ ಸಣ್ಣ ಕಟ್ಟೆಯ ಮೇಲೆ ಹತ್ತಿ ಅಜ್ಜಿ ಕೂಡುವಂತೆಯೇ ಕುಕ್ಕರಗಾಲಲ್ಲಿ ಕೂತ, ಬಕೇಟಿನಿಂದ ಒಂದೊಂದೇ ಬಟ್ಟೆ ತೆಗೆದು, 'ನೋಡು ಶೀನಣ್ಣ, ಹೀಗೆ.. ಹೀಗೆ... ಅಜ್ಜಿ ಹೀಗೆ ಮೆಲ್ಲಗೆ ಉಜ್ಜುತ್ತಾಳೆ' ಅಂತ ತೋರಿಸುತ್ತ ತನ್ನ ಪುಟ್ಟ ಹಸ್ತದಲ್ಲಿ ತುಸು ತುಸುವೇ ನೀರು ಹಾಕುತ್ತ, ಕಲ್ಲಿಗೆ ಹೊಸಕುತ್ತ ಕೊಳೆಯಾಗಿರುವ ತನ್ನ ಪುಟಾಣಿ ಅಂಗಿಯ ಕತ್ತಿನ ಭಾಗಕ್ಕೆ ಇನ್ನೊಮ್ಮೆ ತುಸುವೇ ಸಾಬೂನು ಉಜ್ಜುತ್ತ ಶೀನಣ್ಣನಿಗೆ ತೋರಿಸಿದ. 'ಇಷ್ಟೇ ಇಷ್ಟೇ' ಅಂತ ಧರ್ಮ, ಮಾಯಿಶೀನಣ್ಣನಿಗೆ ಧೈರ್ಯ ತುಂಬಿದ. ಒಬ್ಬ ವಿನಯಶೀಲ ವಿದ್ಯಾರ್ಥಿಯಂತೆ ಮಾಯಿಶೀನ ಕಣ್ಣು ಮಿಟುಕಿಸದೇ ಇವನ್ನೆಲ್ಲ ನೋಡುತ್ತಿದ್ದ. ಇತ್ತ ಅಜ್ಜಿ ಮಾಯಿಶೀನನ ಗುರುವಾದ ತನ್ನ ಪುಟಾಣಿ ಧರ್ಮನನ್ನೇ ಕಣ್ಣರಳಿಸಿ ನೋಡುತ್ತ ಕೂತಿದ್ದಳು.